ಊ) ಸದರಿ ಕಾಮಗಾರಿ ಕೆಲಸಗಳನ್ನು ಪೂರೈಸಲು ಸರ್ಕಾರ ಯಾವುದಾದರೂ ಕಾಲಮಿತಿಯನ್ನು ಹಾಕಿಕೊಳ್ಳಲು ಉದ್ದೇಶಿಸಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಶಂಕುಸ್ಥಾಪನೆಯು 1987ರಲ್ಲಿ ಆಯಿತು.

ಆ) ಕಬಿನಿ ಸಮಗ್ರ ಯೋಜನೆಯ ಪರಿಷ್ಕೃತ ಯೋಜನೆಯಲ್ಲಿ ಏತ ನೀರಾವರಿ ಯೋಜನೆಗೆ ರೂ. 702 ಕೋಟಿಗಳ ಮೊತ್ತವನ್ನು ಒದಗಿಸಿದೆ.

ಇ) ಸದರಿ ಯೋಜನೆಯ ಸರ್ವೇ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಈ) ಇಲ್ಲಿಯವರೆವಿಗೆ ಸರ್ವೇ ಕಾಮಗಾರಿಗಾಗಿ ರೂ. 4.08 ಲಕ್ಷ ಖರ್ಚು ಮಾಡಲಾಗಿದೆ.

ಉ) ಸರ್ವೇ ಕಾರ್ಯಗಳನ್ನು ಪೂರ್ಣಗೊಳಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಊ) ಸದರಿ ಕಾಮಗಾರಿ ಕೆಲಸಗಳನ್ನು 2010ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

648(812) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಧಾನ ಸೌಧದ ಪಕ್ಕದಲ್ಲಿ ಭಾರೀ ಕಟ್ಟಡದ ಅವಶ್ಯಕತೆ ಇತ್ತೇ;

ಆ) ಇದರಿಂದ ವಿಧಾನ ಸೌಧದ ಪ್ರತಿಷ್ಠೆಗೆ ಕುಂದುಂಟಾಗುವುದಿಲ್ಲವೇ;

ಇ) ಸದರಿ ಕಟ್ಟಡದ ನಿರ್ಮಾಣಕ್ಕಾಗಿ ತಗಲುವ ವೆಚ್ಚವೆಷ್ಟು;

ಈ) ಇದುವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಉ) ಸದರಿ ಕಟ್ಟಡದ ಪೂರ್ಣ ಕಾಮಗಾರಿಗಳನ್ನು ಮುಗಿಸಲು ಹಾಕಿಕೊಂಡಿರುವ ಕಾಲಮಿತಿ ಯಾವುದು;

ಊ) ಸದರಿ ಕಟ್ಟಡಕ್ಕೆ ಕೆಂಗಲ್ ಹನುಮಂತಯ್ಯನವರ ಹೆಸರಿನಲ್ಲಿ "ಕೆಂಗಲ್ ಹನುಮಂತಯ್ಯ" ಭವನವೆಂದು ನಾಮಕರಣ ಮಾಡಲು ಸರ್ಕಾರ ತೀರ್ಮಾನಿಸಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಸಚಿವರು)

ಅ) ಹೌದು.

ಆ) ಇಲ್ಲಾ.

ಇ) ಸದರಿ ಕಟ್ಟಡದ ನಿರ್ಮಾಣಕ್ಕಾಗಿ ತಗಲುವ ವೆಚ್ಚ ಸುಮಾರು ರೂ. 125.00 ಕೋಟಿಗಳು.

ಈ) ಜೂನ್ 2004ರ ಅಂತ್ಯದವರೆಗೆ ರೂ. 88.36 ಕೋಟಿಗಳು ವೆಚ್ಚವಾಗಿರುತ್ತದೆ.

ಉ) ಟೆಂಡರ್ ಕರಾರಿನಂತೆ ಕಟ್ಟಡದ ಮೂಲ ಗುತ್ತಿಗೆ ಕಾಮಗಾರಿಗಳು ದಿನಾಂಕ 31-8-2004ರ ಒಳಗೆ ಪೂರ್ಣಗೊಳ್ಳುತ್ತವೆ ಹಾಗೂ ಇತರೆ ಕಾಮಗಾರಿಗಳು ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿವೆ.

ಊ) ಇಲ್ಲ. ಸಧ್ಯಕ್ಕೆ ಇಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

649(814) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜ ನಗರದಲ್ಲಿ ವಿದ್ಯುತ್ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಕೊರತೆಯನ್ನು ನೀಗಿಸಲು ಸರ್ಕಾರ ಹಮ್ಮಿಕೊಂಡಿರುವ ಕ್ರಮಗಳೇನು;

ಇ) ಚಾಮರಾಜನಗರದಲ್ಲಿನ ಸುಮಾರು ಒಂದು ನೂರಕ್ಕೂ ಹೆಚ್ಚು ಹೊಸ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕವಿಲ್ಲದೆ ಕಗ್ಗತ್ತಲಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ಬಂದಿದೆ.

ಆ) ಚಾಮರಾಜನಗರ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಈಗಾಗಲೇ ಈ ಕೆಳಕಂಡ ಕ್ರಮಗಳನ್ನು ಕೈಗೊಂಡು, ಪೂರ್ಣಗೊಳಿಸಲಾಗಿರುತ್ತದೆ.

ಕ್ರಮ ಸಂಖ್ಯೆ	ಪೂರ್ಣಗೊಂಡ ಕೆಲಸದ ವಿವರಗಳು	ಚಾಲಗೊಳಿಸಿದ ದಿನಾಂಕ / ವರ್ಷ
1.	ಚಾಮರಾಜನಗರದಲ್ಲಿ 220/66 ಕೆ.ವಿ. ವಿದ್ಯುತ್ ಸಬ್-ಸ್ಟೇಷನನ್ನು ನಿರ್ಮಾಣ ಮಾಡಿ ಚಾಲನೆಗೊಳಿಸಲಾಗಿದೆ	30-3-2002
2.	ಬೊಮ್ಮಲಾಪುರದಲ್ಲಿ 66 ಕೆ.ವಿ. ವಿದ್ಯುತ್ ಸಬ್-ಸ್ಟೇಷನನ್ನು ನಿರ್ಮಾಣ ಮಾಡಿ ಚಾಲನೆಗೊಳಿಸಲಾಗಿದೆ.	9-9-2002
3.	ಗುಂಡ್ಲುಪೇಟೆಯ 66 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯವನ್ನು 14.3 ಎಂ.ವಿ.ಎ. ನಿಂದ 25 ಎಂ.ವಿ.ಎ ಹೆಚ್ಚಳಗೊಳಿಸಲಾಗಿದೆ.	2002-03 ಮತ್ತು 2003-04
4.	ಹನೂರಿನಲ್ಲಿರುವ 66 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್ನಿನ ಸಾಮರ್ಥ್ಯವನ್ನು 5 ಎಂ.ವಿ.ಎ.ಗೆ ಹೆಚ್ಚಳಗೊಳಿಸಲಾಗಿದೆ.	26-12-2002

ಈ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸುಧಾರಿಸಲು ಈ ಕೆಳಕಂಡ ಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.